ಅಲುಗಾಡಿಸಿ ಏನಾದ್ರೂ ಮಾತಾಡಬೇಕಿತ್ತು, ಗಟ್ಟಿಯಾಗಿ ಹಿಡಕೊಂಡು ಅಳಬೇಕಾಗಿತ್ತು ಅಂತ ಅಪ್ಪ ಸತ್ತು ಹದಿನೈದು ವರ್ಷಗಳ ಮೇಲೆ ಈಗ ಒಮ್ಮೊಮ್ಮೆ ಅನ್ನಿಸುತ್ತದೆ. ಅವಿನಾಶನೂ ಬಾಲ್ಯದಲ್ಲೇ ತಂದೆಯನ್ನು ಕಳಕೊಂಡವ. ತಾಯಿಯ ಬೆರಳ್ಹಿಡಿದು ಸೋದರಮಾವನ ಛಾಯೆಯಡಿ ಬೆಳೆದ ಅಂತ ಹೀಗೆ ಇಷ್ಟು ಸೂಕ್ಷ್ಮ ಆದನಾ, ಯಾರಿಗ್ಗೊತ್ತು ಅಂತನ್ನಿಸಿ ಒಮ್ಮೆ ಕೇಳಿದ್ದಳು:

''ಅತ್ತೆ, ಸದುಮಾವ ಒಂಚೂರು ಕಡಕ್ ಅಲ್ವಾ? ಅವಿನಾಶ ಅವರ ಮನೇಲಿ ಓದೋಕಿದ್ದಾಗ ಅವರನ್ನು ಬೈಯ್ದು ಗೀಯ್ದು ಏನಾದ್ರೂ...''

''ಛೇ ಛೇ ಅದೇನಿಲ್ಲ ಕಣೆ, ಸದಾನಂದ ಅಂಥವನಲ್ಲ. ಆದರೆ ಮನೆ ಅಂದರೆ ಒಬ್ಬನ ಸೊತ್ತಾ? ಅಲ್ಲದೆ ಮನುಷ್ಯ ಕೈಯೆತ್ತಿದರೆ, ಕೆಟ್ಟ ಮಾತಾಡಿದರೇನೇ ಕ್ರೂರಿನಾ? ಹಾಗೆ ಶಾಲಿನಿ ಅತ್ತಿಗೆ ಒಳ್ಳೆಯವಳೇ, "ಇವನಿಗೆ ಬೇಯಿಸಿ ಹಾಕಿ ಸೋತೆ ನಾ, ನಮ್ಮದೇ ಹಾಸಿ ಹೊದೆಯುವಷ್ಟು ತಾಪತ್ರಯವಿರುವಾಗ ಇವನೊಬ್ಬ" ಅಂತೆಲ್ಲ ಗಂಡನಿಗೆ ತಕರಾರು ಹೇಳೋ ಮಾಮೂಲು ಹೆಂಡಂದಿರ ಪೈಕಿಯಲ್ಲ ಅವಳು. ಆದರೆ ಮೂಡು ಕೆಟ್ಟಿತೋ ತಿಂಡಿಯ ಪ್ಲೇಟು ಧಡ್ ಅಂತ ಅವಿಯ ಮುಂದೆ ಕುಕ್ಕಿದರೆ ಅರ್ಧ ಉಪ್ಪಿಟ್ಟೇ ಹೊರ ಚೆಲ್ಲಿರಬೇಕು ಹಾಗೆ. ಒಂದಿನ ನಗುತ್ತ ಮಾತಾಡಿದರೆ ಮರುದಿನ ಇವನ ಮುಖ ಕಂಡರೇ ಹುಬ್ಬುಗಂಟು, ಕಣ್ಣಲ್ಲಿ ತಿರಸ್ಕಾರ; ಗಂಡನೆಂದರೆ ಕೈಹಿಡಿದ ಅಧಿಕಾರಿ; ದೀಪು ಹೊಟ್ಟೆಯ ಮಗ. ಅಮ್ಮನಂತೂ ಸರಿಯೇ, ಎಲ್ಲ ಹಕ್ಕಿನವರೇ ಮನೆಯಲ್ಲಿ, ಸಿಟ್ಟು ಮಾಡೋದ್ಯಾರ ಮ್ಯಾಲೆ ಹೇಳು? ಏನು ಮಾಡಿದ್ರೂ ನಡೆಯುತ್ತೆ ಅಂತನ್ನೋರು ಯಾರಾದರೂ ಇದ್ದರೆ ಅದು ಅವಿಯೊಬ್ಬನೇ. ನಿನಗೆ ಗೊತ್ತಿಲ್ಲ ಜೀವಿಕಾ, ತನ್ನದಲ್ಲದ ಮನೆಯಲ್ಲಿ ಮತ್ತೊಬ್ಬರ ಮರ್ಜಿ ಹಿಡಿದು ಬದುಕೋದೆಂದರೆ ಏನು ಅಂತ" ಅಂತ ನಿಟ್ಟುಸಿರಿಟ್ಟಿದ್ದರು.

ಅದಕ್ಕೇ ಇರಬೇಕು ತನ್ನ ಮನೆ, ತನ್ನ ತಾಯಿ, ತನ್ನವಳೆಂದೇ ನಂಬಿದ ಹೆಂಡತಿ ಇಷ್ಟಕ್ಕೇ ಅವಿನಾಶ ತೃಪ್ತ. ನನಗೂ ಪತಿ, ಮನೆ, ಮುಂದೆ ಹೇಗೆಂಬ ಚಿಂತೆಯಿಲ್ಲದ ನಾಳೆಗಳು – ಎಲ್ಲ ಇವೆ. ಮತ್ತೇಕೆ ಈ ಹಪಾಹಪಿ? ವಿನಾಕಾರಣ ಮೈಕೈ ಪರಚಿಕೊಳ್ಳುವಷ್ಟು ಸಂತಾಪಕ್ಕೆ ಏನು ಮಾಡ್ಬೇಕಂತ ತಿಳಿಯದೆಯೇ ರಾತ್ರಿಯೆಲ್ಲ ನಾಲ್ಕು ಕಪ್ಪು ಕಾಫಿಯೊಟ್ಟಿಗೆ 'ಫೀಲ್ ಹ್ಯಾಪಿ' ಪುಸ್ತಕಗಳ ರಾಶಿ ಓದಿ ನಿದ್ದೆಗೆಟ್ಟಳು. ದಿನಾ ಬೆಳಿಗ್ಗೆ ಪ್ರಾಣಾಯಾಮ ಯೋಗಗಳಲ್ಲಿ ಮೈ ಮಣಿಸಿ ಸಂಜೆಗೆ ಜಿಮ್ಮಿನಲ್ಲಿ ವೇಟುಗಳನ್ನು ಬೆವರು ಕಿತ್ತಾಡುವಂತೆ ಎತ್ತಾಡಿದಳು. ನಿಂಗಮ್ಮ ಮಾಡಿದ ಬೋಂಡಾ ಜಾಮೂನು ಅತ್ತೆ ಸವಿಯುವಾಗ ಬಾಯಲ್ಲಿನ ನೀರು ನುಂಗಿಕೊಂಡು ಸಲಾಡಿನ ಹೆಸರಲ್ಲಿ ಹಸಿ ಕೋಸು, ಬೀಟರೂಟು, ಗಜ್ಜರಿಗಳನ್ನು ಆಡಂತೆ ಮೇದದ್ದೇ ಬಂತು. 'ಯು ಆರ್ ಗುಡ್', 'ಬಿ ಕಾನಫಿಡೆಂಟ್ ಆಫ್ ಯುವರ್ಸೆಲ್ಫ್' ಇತ್ಯಾದಿ ರಂಗುರಂಗಿನ ಚೀಟಿ ಅಲ್ಲಲ್ಲಿ ಬರೆದಂಟಿಸಿದರೂ ಗುಲಗಂಜಿಯಷ್ಟೂ ಸ್ವಂತಕ್ಕೇ ಹುಟ್ಟಲಿಲ್ಲ ನಂಬಿಕೆ – ಒಟ್ಟಿನಲ್ಲಾದ ಪರಿಣಾಮ ಏನಪ್ಪಾ ಅಂದರೆ ಮೊದಲೇ ಅವಳ ಚೆನ್ನಾಗಿದ್ದ ಮೈಮಾಟ ಮತ್ತೂ ಕೆತ್ತಿದ ಶಿಲ್ಪವಾಯ್ತು, ರಕ್ತ ಸಂಚಾರ ಸರಿಯಾಗಿ ಚರ್ಮ ಒಳ್ಳೆ ಕಾದ ಹಂಚಂತೆ ಕೆಂಪಗೆ ಹೊಳೆಯಿತಷ್ಟೆ. ಯಾಕೋ ಸ್ವಲ್ಪ ದಿನಕ್ಕೇ ಎಲ್ಲ ರೇಜಿಗೆಯಾಗಿ, 'ಇದೆಲ್ಲ ತಗೊಂಡೇನು ಉಪ್ಪಿನಕಾಯಿ ಹಾಕೋದು? ಸಾಯಲಿ ಅತ್ಲಾಗೆ' ಅಂತ ಮತ್ತೆ ತನ್ನ ಸಂಜೆಯ ಸಿನಿಮಾ, ಕಾಫಿ ಬೋಂಡಾಗಳ ದುನಿಯಾಕ್ಕೆ ಮರಳಿದ್ದಾಗಿತ್ತು.

ಅತ್ತೆ ಇನ್ನೂ ಕಿಡಕಿಯ ಬಳಿಯೇ ನಿಂತಿದ್ದು ನೋಡಿ ತಾನೂ ಹೋಗಿ ಗಾಜಿನ ಫಡಕನ್ನೇ ದಿಟ್ಟಿಸಿದಳು ಜೀವಿಕಾ. ಸ್ಲೈಡೇನೋ ಸರಿದಿದೆ; ಬೆಳಿಗ್ಗೆ ಬಹುಶಃ ಅವಿನೇ ಸರಿಸಿದ್ದನೇನೋ. ಗಾಜಿನ ಮೇಲೆ ಯಾರದ್ದೋ ಉಸಿರಿನ ಆವಿ ಕಲೆಗಟ್ಟಿದೆ. ಯಾರದ್ದಂತ ಹ್ಯಾಗೆ ಹೇಳೋದು? ಮತ್ತೂ ಬಾಗಿ ನೋಡಹೋದ್ರೆ ಅವಳ ಬಿಸಿಯುಸಿರೇ ಗಾಜಿಗೆ ಭುಸ್ ಅಂತ ಬಡಿದು ಮೊದಲೇ ಇದ್ದ ಕಲೆಯೊಂದಿಗೆ ಮಿಳಿತಗೊಂಡು ಯಾವುದು ತನ್ನದು? ಯಾವುದು ಮೊದಲಿಂದು? ಅಂತ ಗೊತ್ತಾಗದ ಹಾಗೆ

